ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ , ಕುಂದಾಪುರ

ಸಿ.ಸಿ. ನಂಬ್ರ: 1702/2018

ಚಾಸಾ: 10 ಪ್ರಾಸಾ:8

ದಿನಾಂಕ: 05.06.2026

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಅನಿಲ್ ಕುಮಾರ್ |
| ತಂದೆಯ ಹೆಸರು | : | ಶಿವರಾಮ ಶೆಟ್ಟಿ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಗ್ರಾಮಾಡಳಿತ ಅಧಿಕಾರಿ, ಕಾಳವಾರ ಗ್ರಾಮ |
| ವಾಸ ಸ್ಥಳ | : | ಬಾರ್ಕೂರು |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ನಾನು 2017 ರಿಂದ 2019ರವರೆಗೆ ಗ್ರಾಮ ಲೆಕ್ಕಾಧಿಕಾರಿಯಾಗಿ ಯಡ್ಯಾಡಿ ಮತ್ಯಾಡಿ ವೃತ್ತದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 19-01-2018 ರಂದು ಕುಂದಾಪುರ ಗ್ರಾಮಾಂತರ ಠಾಣೆಯಿಂದ ಸಿಬ್ಬಂದಿಯವರು ಬಂದು ಘಟನಾ ಸ್ಥಳವನ್ನು ತೋರಿಸಲು ಕರೆದುಕೊಂಡು ಹೋಗಿರುತ್ತಾರೆ. ನಂತರ ಸದ್ರಿ ಘಟನಾ ಸ್ಥಳವನ್ನು ಪೊಲೀಸರು ತೋರಿಸಿದ್ದು ಸದ್ರಿ ಸ್ಥಳ ಯಾರಿಗೆ ಸೇರಿದ್ದು ಎಂಬ ಬಗ್ಗೆ ಮಾಹಿತಿ ನೀಡುವಂತೆ ಮನವಿ ನೀಡಿದ್ದು ಅದರಂತೆ ನಾನು ಸರ್ವೆ ನಂಬ್ರವನ್ನು ವೀಕ್ಷಿಸಲಾಗಿ ಸದ್ರಿ ಸರ್ವೆ ನಂಬ್ರ 37/7 ರಲ್ಲಿ 0.31 ಎಕ್ರೆಗೆ ಕರಿಯ ದೇವಾಡಿಗರವರದ್ದಾಗಿರುತ್ತದೆ ಎಂದು ವರದಿಯನ್ನು ನೀಡಿರುತ್ತೇನೆ.

ಈಗ ಸಾಕ್ಷಿಗೆ ನಿಪಿ-6ನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ವಕೀಲರಾದ ಶ್ರೀ ಕೆ ಯು ಎಸ್ ರವರಿಂದ:**

ಪೊಲೀಸರ ಕೋರಿಕೆಯ ಮೇರೆಗೆ ನೀವು ವರದಿಯನ್ನು ನೀಡಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದ್ರಿ ಸ್ಥಳವು ಕರಿಯ ದೇವಾಡಿಗರವರಿಗೆ ಸೇರಿದ್ದು

ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದ್ರಿ ಸ್ಥಳವು ಪಟ್ಟಾ (ಖಾಸಗಿ) ಸ್ಥಳ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಸದ್ರಿ ಸ್ಥಳದ ಅಳತೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಅಂದಾಜಿನ ಮೇಲೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನು ಡಿಯುತ್ತಾರೆ. ಅಕ್ರಮ ಮರುಳುಗಾರಿಕೆ ಮಾಡಿದ ಬಗ್ಗೆ ನಿಮಗೆ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಸದ್ರಿ ಸ್ಥಳಕ್ಕೆ ಹೋಗಿರುವುದಿಲ್ಲ ಪೊಲೀಸರಿಗೆ ಸಹಾಯ ಮಾಡಲು ವರದಿಯನ್ನು ನಿಮ್ಮ ಕಚೇರಿಯಲ್ಲಿ ಸೃಷ್ಟಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**